ಬಯ್ಯುವುದರಿಂದ ಆನಂದ ದೊರೆಯುತ್ತದೆ. ಅವರು ಆಯಾ ಕಾರ್ಯಕ್ರಮವನ್ನು ಅದೆಷ್ಟು ಕೆಟ್ಟದಾಗಿದೆ ಅಂದರೆ ಅದೇ ನಮಗೆ ಆನಂದ ಎನ್ನುತ್ತಾರೆ. ಇಂತಹ ನೋಡುಗರು ತಾವು ನೋಡುವ ಕಾರ್ಯಕ್ರಮದಿಂದ ಒಂದು ಭಾವನಾತ್ಮಕ ದೂರವನ್ನು ಕಾಯ್ದುಕೊಳ್ಳುತ್ತಾರೆ. ಅವರು ಆ ಕಾರ್ಯಕ್ರಮದ ಕತೆಯ ಜೊತೆಗೆ ಅಥವಾ ಅದರಲ್ಲಿನ ವಿವರಗಳ ಜೊತೆಗೆ ತನ್ಮಯತೆಯನ್ನು ಸಾಧಿಸದೆ ಇರುವುದೇ ಅವರ ಬಹುತೇಕ ಆನಂದಕ್ಕೆ ರಹದಾರಿ ಆಗಿರುತ್ತದೆ.

ಈ ದೃಷ್ಟಿಕೋನದಿಂದ ಕಾರ್ಯಕ್ರಮ ನೋಡುವವರಿಗೆ, ತಾವು ನಿರ್ಮಾಪಕರಿಗಿಂತ ಹೆಚ್ಚು ತಿಳಿದವರು; ಹಾಗಾಗಿ ನಾವು ಸಂಪ್ರದಾಯಸ್ಥ ನೋಡುಗರಲ್ಲ ಎಂಬ ಮೇಲರಿಮೆಯೂ ಇರುತ್ತದೆ. ಇಂತಹ ನೋಡುಗ ವರ್ಗಕ್ಕೆ ಸೇರಬಲ್ಲ ಕಾಲೇಜ್ ವಿದ್ಯಾರ್ಥಿಯೊಬ್ಬರು, 'ಆ ಕಾರ್ಯಕ್ರಮ ಅದೆಷ್ಟು ಕೆಟ್ಟದಾಗಿದೆ ಎಂದರೆ ಅದನ್ನು ನೋಡುತ್ತಾ ನಾನು ಅವರಿಗಿಂತ ಬುದ್ಧಿವಂತ ಎಂಬ ಸಂತೋಷ ಸಿಗುತ್ತದೆ' ಎಂದರು. ಹೀಗೆ ತಮ್ಮ ಮನಸ್ಸಿಗೆ ಇಷ್ಟವಾಗದ ಕಾರ್ಯಕ್ರಮ ನೋಡುವ ಮೂಲಕ ವೈರುಧ್ಯ ಆನಂದಿಗಳು ತಾವು ಹೆಚ್ಚು ಸುಸಂಸ್ಕೃತರು ಎಂಬ ಆನಂದ ಪಡೆಯುತ್ತಿರುತ್ತಾರೆ.

ಇಂತಹವರು ಅತ್ಯಂತ ಜನಪ್ರಿಯ ಎನಿಸುವ ಅನೇಕ ಕಾರ್ಯಕ್ರಮಗಳನ್ನು, ಧಾರಾವಾಹಿಗಳನ್ನು ಕುರಿತು 'ಮೀಮ್ಸ್' ಮಾಡುವವರಾಗಿರುತ್ತಾರೆ. ಅಂತಹ ಕಾರ್ಯಕ್ರಮದ ವಿಡಿಯೋಗಳನ್ನು ಸಂಗ್ರಹಿಸಿ ತಮ್ಮದೇ ಯೂಟ್ಯೂಬ್ ವಾಹಿನಿಯಲ್ಲಿ ಸದರಿ ಕಾರ್ಯಕ್ರಮದ ಅತ್ಯಂತ ದರಿದ್ರ ದೃಶ್ಯಗಳು ಎಂತಲೋ ಅಥವಾ ಸದರಿ ಧಾರಾವಾಹಿಯ ಅಪಸವ್ಯಗಳು ಅಂತಲೋ ಹೆಸರಿಟ್ಟು ಪ್ರಸಾರ ಮಾಡುತ್ತಾರೆ. ಅವರಂತೆಯೇ ಆಲೋಚಿಸುವ ಅನೇಕ ಗೆಳೆಯರು ಆ ವಿಡಿಯೋಗಳಿಗೆ ಪ್ರತಿಕ್ರಿಯೆ ಬರೆಯುವಾಗಲೂ ತಮಾಷೆ ಮಾಡುತ್ತಾ ಆನಂದಿಸುತ್ತಾ ಇರುತ್ತಾರೆ.

ಈ ತಮಾಷೆಗಳು ಆಯಾ ಕಾರ್ಯಕ್ರಮ ಮಾಡುವವರ ಮೇಲೆ ಮಾಡುವ ಪರಿಣಾಮ ಏನು ಅನ್ನುವುದು ಪ್ರತ್ಯೇಕ ಚರ್ಚೆಯ ವಿಷಯ. ಅದನ್ನು ಮತ್ತೆ ಯಾವಾಗಾದರೂ ಚರ್ಚಿಸೋಣ.

## ಗುಂಪು ಗುಣ

ಮತ್ತೊಂದು ನೋಡುಗ ವರ್ಗವಿದೆ. ಅದು ತನ್ನ ಸುತ್ತಲಿನವರು ಏನು ನೋಡುತ್ತಾರೋ ಅದನ್ನು ನೊಡುವಂತಹದು. ಟಿವಿಯಲ್ಲಿ ರಾಮಾಯಣ ಬರುತ್ತಿದ್ದ ಕಾಲದಲ್ಲಿ ನಗರಗಳ ಎಲ್ಲಾ ರಸ್ತೆಗಳೂ ಖಾಲಿ ಇರುತ್ತಿದ್ದವಲ್ಲ.. ಆ ಬಗೆಯ ಗುಣವಿದು. ತಮ್ಮ ಜೊತೆಗಾರರು ಯಾವುದನ್ನು ನೋಡುತ್ತಾರೋ ಅದನ್ನು ತಾವೂ ನೋಡುವ ಗುಣ ಇದು. ಇಲ್ಲಿ ಕಾರ್ಯಕ್ರಮವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೊಡುವುದಕ್ಕಿಂತ ತನ್ನ ಗುಂಪು ಸೇರಿದಾಗ ಆಡುವ ಮಾತಲ್ಲಿ ತಾನೂ ಪಾಲ್ಗೊಳ್ಳಬೇಕೆಂಬ ಉತ್ಸಾಹ ಮಾತ್ರ ಇರುತ್ತದೆ. ಈ ನೊಡುಗರು ತಾವು ನೋಡುತ್ತಾ ಇರುವ ಕಾರ್ಯಕ್ರಮದ ಬಗ್ಗೆ ಅಳುಕು ಉಳ್ಳವರಲ್ಲ, ಆ ಕಾರ್ಯಕ್ರಮವನ್ನು ತಮ್ಮ ನಿಲುವಿಗೆ ವಿರುದ್ಧವಾದುದು ಎಂದು ನೊಡುವವರಲ್ಲ. ಬದಲಿಗೆ ಇಂತಹ ನೊಡುಗರಲ್ಲಿ ತಾವು ನೋಡುತ್ತಾ ಇರುವ ಕಾರ್ಯಕ್ರಮದ ಬಗ್ಗೆ ವಿಚಿತ್ರ ಅಭಿಮಾನ ಇರುತ್ತದೆ. ಅದನ್ನು ಮಗುವಿನ ಮುಗ್ಧತೆ ಎನ್ನಬಹುದು. ಈ ಮುಗ್ಧತೆಯ ಕಾರಣವಾಗಿ ಎಷ್ಟೋ ಸಲ ಅತ್ಯಂತ ಕಳಪೆ ಎನಿಸುವ ಕಾರ್ಯಕ್ರಮವನ್ನು ಸಹ ಈ ನೋಡುಗರು ತಮ್ಮ ಗುಂಪು ವರ್ತನೆಯ ಕಾರಣಕ್ಕಾಗಿ ನೋಡುವುದಿದೆ.

ಈ ಗುಂಪು ಗುಣದ ನೊಡುಗರು ತಾವು ನೋಡುತ್ತಾ ಇರುವ ಕಾರ್ಯಕ್ರಮದ ತಯಾರಕರು, ನಟರು ಎಲ್ಲರ ಮಹಾನ್ ಅಭಿಮಾನಿಗಳಾಗುವುದೇ ಹೆಚ್ಚು. ಈ ಅಭಿಮಾನದ ಕಾರಣವಾಗಿಯೇ ಆಯಾ ಕಾರ್ಯಕ್ರಮದಲ್ಲಿ ಮೇಲ್ನೋಟಕ್ಕೆ ಕಾಣಬಹುದಾದ ತಪ್ಪುಗಳನ್ನು ಸಹ ಅವರು ಕ್ಷಮಿಸುತ್ತಾರೆ ಮತ್ತು ಆರಾಧಕರಾಗಿ ಉಳಿದು ಬಿಡುತ್ತಾರೆ. ನಮ್ಮ ದೇಶದಲ್ಲಿ ಬಹುತೇಕ ತಾರಾಮೌಲ್ಯದ, ಅತೀ ಜನಪ್ರಿಯವಾದ ಟೆಲಿವಿಷನ್ ಕಾರ್ಯಕ್ರಮಗಳೆಲ್ಲದರ ಹಿಂದೆ ಈ ಗುಂಪು ಗುಣವೇ ಹೆಚ್ಚು ಕೆಲಸ ಮಾಡಿರುವುದನ್ನು ಕಾಣಬಹುದು.

ಕೆಲವೇ ವರ್ಷಗಳ ಹಿಂದೆ ಅತ್ಯಂತ ಜನಪ್ರಿಯವಾಗಿದ್ದ ಕಾರ್ಯಕ್ರಮವೊಂದನ್ನು ಇಂದು ಮೌಲ್ಯಮಾಪನಕ್ಕೆಂದು ನೋಡಿದಾಗ ಇಂತಹುದೊಂದು ಕಾರ್ಯಕ್ರಮ ಈ ಮಟ್ಟದ ಜನಪ್ರಿಯತೆ ಹೇಗೆ ಸಾಧಿಸಿತು ಎಂಬ ಅನುಮಾನ ಖಂಡಿತ ಬರುತ್ತದೆ. ಈ ಗುಂಪು ಗುಣ ಭಾರತದ ಹಿರಿತೆರೆ ಮತ್ತು ಕಿರುತೆರೆಗಳನ್ನು ಸದಾ ಗೆಲ್ಲಿಸುತ್ತಿರುವುದಂತೂ ಹೌದು. ಅದಕ್ಕಾಗಿ ಅನೇಕ ಕಾರ್ಯಕ್ರಮ ತಯಾರಕರು ಬಗೆ ಬಗೆಯ ಪ್ರಚಾರ ಕಾರ್ಯಕ್ರಮಗಳನ್ನು ಸಹ ರೂಪಿಸುತ್ತಾರೆ. ಆ ಮೂಲಕ ಒಂದು ಕಾರ್ಯಕ್ರಮವನ್ನು ಗೆಲ್ಲಿಸಿದ್ದೂ ಇದೆ, ತಮ್ಮ ಎದುರಾಳಿಗಳ ಕಾರ್ಯಕ್ರಮಗಳನ್ನು ಮುಳುಗಿಸಿದ ಉದಾಹರಣೆಯೂ ಇದೆ. ಕಳೆದೆರಡು ದಶಕದ ಟೆಲಿವಿಷನ್ ಇತಿಹಾಸದಲ್ಲಿ ಈ ಗುಂಪುಗುಣದ ಕಾರಣವಾಗಿ ಯಶಸ್ವಿಯಾದ ಕಾರ್ಯಕ್ರಮಗಳೇ ಹೆಚ್ಚು ಎಂಬುದೂ ಗಮನಿಸಬಹುದಾದ ಅಂಶ.

'ಬಿಳಿ ಹೆಂಡ್ತಿ'ಯ ಜೋಡಿ

